**<u>ದಿನಾಂಕ: 25.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಹೆಚ್.ಎಸ್.ಹೆಚ್. ವಕೀಲರಿಂದ:</u>**

1) ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಪ್ರತಿವಾದಿಗಳು ನಮ್ಮ ಜಾಗದಲ್ಲಿ ಹಸುಗಳನ್ನು ಕಟ್ಟಲು ಹೋದರೆ ಮತ್ತು ಇತರೆ ವಿಚಾರಗಳಿಗೆ ತೊಂದರೆ ಮಾಡುತ್ತಿದ್ದ ಕಾರಣ ಈ ಪ್ರಕರಣವನ್ನು ದಾಖಲಿಸಿರುತ್ತೇನೆ. ಪ್ರತಿವಾದಿಗಳು ತೊಂದರೆ ಕೊಟ್ಟಿರುತ್ತಾರೆ ಎಂದು ತೋರಿಸಲು ನಾನು ಪಂಚಾಯಿತಿಗೆ ಮತ್ತು ಪೋಲಿಸ್ ಠಾಣೆಗೆ ದೂರನ್ನು ಕೊಟ್ಟಿರುತ್ತೇನೆ. ಸದರಿ ದೂರಿನ ಪ್ರತಿಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತಿನ ಖಾತಾ ನಂ.80/3 ಆಗಿರುತ್ತದೆ. ದಾವಾ ಸ್ವತ್ತನ್ನು ನನ್ನ ತಾಯಿ ಜಯರತ್ನಮ್ಮರವರಿಂದ ಖರೀದಿ ಮಾಡಿದ್ದರು.

2) ದಾವಾ ಸ್ವತ್ತು ಜಯರತ್ನಮ್ಮರವರಿಗೆ ಬೋರೇಗೌಡರಿಂದ ಬಂದಿತ್ತು. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಜಯರತ್ನಮ್ಮರವರು ಬೋರೇಗೌಡರವರಿಂದ ಯಾವ ವರ್ಷದಲ್ಲಿ ದಾವಾ ಸ್ವತ್ತನ್ನು ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನಮ್ಮ ಸ್ವತ್ತನ್ನು ಅಳತೆ ಮಾಡುತ್ತೇವೆ ಎಂದು ಪಂಚಾಯಿತಿಯಿಂದ ಯಾವುದೇ ನೋಟೀಸು ಬಂದಿರುವುದಿಲ್ಲ. ಅದೇ ರೀತಿ ಆ ಸ್ವತ್ತನ್ನು ಅಳತೆ ಮಾಡವುದಾಗಿ ತಹಶೀಲ್ದಾರ್ ಮತ್ತು ಇತರೆ ಯಾವುದೇ ಸರ್ವೆ ಅಧಿಕಾರಿಗಳಿಂದ ಯಾವುದೇ ನೋಟೀಸ್ ಬಂದಿರುವುದಿಲ್ಲ.

3) ದಾವಾ ಸ್ವತ್ತು ಗ್ರಾಮ ಠಾಣೆಗೆ ಸೇರಿಲ್ಲ, ಅದು ಸರ್ವೆ ನಂಬರ್ ವ್ಯಾಪ್ತಿಗೆ ಒಳಪಟ್ಟಿದೆ. ದಾವಾ ಸ್ವತ್ತಿನಲ್ಲಿ ಮನೆ ಕಟ್ಟಲು ಪಂಚಾಯಿತಿಯಿಂದ ಅನುಮತಿಯನ್ನು ಪಡೆದುಕೊಂಡಿರುತ್ತೇವೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಪರವಾನಿಗೆ ಪತ್ರದಲ್ಲಿ ದಾವಾ ಸ್ವತ್ತು ಎಷ್ಟು ವಿಸ್ತೀರ್ಣದಿಂದ ಕೂಡಿದೆ ಮತ್ತು ಎಷ್ಟು ವಿಸ್ತೀರ್ಣದ ಒಳಗೆ ಮನೆಯನ್ನು ಕಟ್ಟಲು ಪರವಾನಿಗೆಯನ್ನು ನೀಡಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ.

4) ದಾವಾ ಸ್ವತ್ತಿನ ಪೂರ್ವಕ್ಕೆ ಪ್ರತಿವಾದಿ ಸಂದೀಪ್, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸಿದ್ದೇಗೌಡರ ಜಾಗ, ದಕ್ಷಿಣಕ್ಕೆ ರಸ್ತೆ ಮತ್ತು ಪುಟ್ಟಸ್ವಾಮಿಗೌಡರ ಮನೆ

ಇರುತ್ತದೆ. ಪ್ರತಿವಾದಿಗಳ ಸ್ವತ್ತಿನ ವಿಸ್ತೀರ್ಣದ ಬಗ್ಗೆ ನನಗೆ ಮಾಹಿತಿ ಇದೆ. ಅವರು ಯಾರಿಂದ ಸ್ವತ್ತನ್ನು ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**